Office order


# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

AMBEDKAR DEVELOPMENT CORPORATION

೯ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-560 001

ದೂರವಾಣಿ ಸಂಖ್ಯೆ: .080-22868870, 22867097, 22865192, ಫ್ಯಾಕ್ಸ್-080-22860396

**e-mail: mdadcl2011@gmail.com**


ಸಂಖ್ಯೆ:ಅಂಅನಿ/ಸಿ-ಆ/ /2022-23 / 4536 ದಿನಾಂಕ:30.06.2022

## ಸುತ್ತೋಲೆ

ವಿಷಯ : ನಿಗಮದ ಜಿಲ್ಲಾ ಕಛೇರಿಗಳಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಲು ಬಾಡಿಗೆ ವಾಹನವನ್ನು ಪಡೆಯುವ ಬಗ್ಗೆ.

ಉಲ್ಲೇಖ : ನಿಗಮದ 229ನೇ ನಿರ್ದೇಶಕ ಮಂಡಳಿ ಸಭೆಯ ನಿರ್ಣಯ

****

ಉಲ್ಲೇಖಿತ ನಿರ್ದೇಶಕ ಮಂಡಳಿ ಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ವಿವಿಧ ಯೋಜನೆಗಳ ಫಲಾನುಭವಿಗಳ ಸ್ಥಳ ಪರಿಶೀಲನೆ, ಅನುಷ್ಠಾನ ಹಾಗೂ ಸಾಲ ಮರುಪಾವತಿ ಮಾಡಿಸುವ ಮಹತ್ತರ ಜವಾಬ್ದಾರಿಯನ್ನು ಹೊಂದಿರುವುದರಿಂದ ಉತ್ತಮವಾದ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಹೆಚ್ಚುವರಿ ವಾಹನವನ್ನು ಜಿಲ್ಲೆಗೆ ಒದಗಿಸಲು ತೀರ್ಮಾನವಾಗಿರುತ್ತದೆ. ಜಿಲ್ಲಾ ವ್ಯವಸ್ಥಾಪಕರ ಅಧೀನದಲ್ಲಿರುವ ಒಂದು ವಾಹನದ ಜೊತೆಗೆ ಮತ್ತೊಂದು ಹೆಚ್ಚುವರಿ ವಾಹನವನ್ನು ಗರಿಷ್ಟ ರೂ.30,000/- ಮಾಸಿಕ ಬಾಡಿಗೆಯ ಆಧಾರದಲ್ಲಿ ಪಡೆಯಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತುಗಳು**:

1. ಒಂದಕ್ಕಿಂತ ಹೆಚ್ಚು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಗಳಿಗೆ ಮಾತ್ರ ಈ ಅನುಮತಿ ಅನ್ವಯಿಸುತ್ತದೆ.
2. ಮಹಿಳಾ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಿಗೆ ಆದ್ಯತೆಯ ಮೇರೆಗೆ ವಾಹನದ ಹಂಚಿಕೆ ಮಾಡುವುದು.
3. ಒಟ್ಟು ತಾಲ್ಲೂಕುಗಳನ್ನು ಲೆಕ್ಕ ಹಾಕಿ ಜಿಲ್ಲಾ ವ್ಯವಸ್ಥಾಪಕರ ವಾಹನ ಹಾಗೂ ಬಾಡಿಗೆ ವಾಹನದ ಹಂಚಿಕೆ ವೇಳಾಪಟ್ಟಿ ನಿಗದಿ ಪಡಿಸುವುದು.
4. ತಾತ್ಕಾಲಿಕ ಪ್ರವಾಸ ಪಟ್ಟಿಯನ್ನು ಅಧಿಕಾರಿಗಳು ಕಡ್ಡಾಯವಾಗಿ ಸಲ್ಲಿಸಿ ಅನುಮೋದನೆ ಪಡೆದು ಅದರಂತೆ ವಾಹನ ಬಳಕೆ ಮಾಡಿ, ಪ್ರವಾಸ ದಿನಚರಿ-ಘಟಕ ಪರಿಶೀಲನಾ ವರದಿ ಸಲ್ಲಿಸುವುದು. ಇದನ್ನು ಜಿಲ್ಲಾ ವ್ಯವಸ್ಥಾಪಕರು/ಉಪ ಪ್ರಧಾನ ವ್ಯವಸ್ಥಾಪಕರು ವಿಮರ್ಶೆ ಮಾಡಿ ಕೇಂದ್ರ ಕಛೇರಿಗೆ ಮಾಸಿಕ ಪ್ರಗತಿಯಂತೆ ವರದಿ ಮಾಡುವುದು.
5. ಪ್ರತಿ ತಿಂಗಳು ಸಾಲ ಮರುಪಾವತಿ ಗುರಿಯನ್ನು ನಿಗದಿ ಪಡಿಸಿ, ಗುರಿಗೆ ಎದುರಾಗಿ ಸಾಧಿಸಿದ ಮರುಪಾವತಿ ಮೊತ್ತದ ವಿವರಗಳನ್ನು ವಿಮರ್ಶೆ ಮಾಡಿ ಮಾಸಿಕ ಪ್ರಗತಿ ವರದಿಯೊಂದಿಗೆ ಸಲ್ಲಿಸುವುದು.
6. ಬಾಡಿಗೆ ವಾಹವನ್ನು ಕಡ್ಡಾಯವಾಗಿ, ಸುಸ್ಥಿತಿಯಲ್ಲಿರುವ ಹಳದಿ ಬೋರ್ಡ್ ಟ್ಯಾಕ್ಸಿಯನ್ನು ಅಧಿಕೃತ ಚಾಲನಾ ಪರವಾನಗಿ ಹೊಂದಿರುವ ವಾಹನ ಚಾಲಕರೊಂದಿಗೆ ಪಡೆಯುವುದು.
7. ವಾಹನವನ್ನು ಬಾಡಿಗೆಗೆ ಪಡೆಯುವಾಗ ಕಡ್ಡಾಯವಾಗಿ ಒಂದು ವರ್ಷದ ಅವಧಿಗೆ ಮಿತಿಗೊಳಿಸಿ, ಸೂಕ್ತ ಷರತ್ತುಗಳನ್ನು ವಿಧಿಸಿ ಕರಾರು ಮಾಡಿಕೊಳ್ಳತಕ್ಕದ್ದು.
8. ವಾಹನ ಬಳಕೆ ಮತ್ತು ಇತರೇ ಸಂಬಂಧಿತ ವಿಷಯದಲ್ಲಿ ಯಾವುದೇ ಸಮಸ್ಯೆಗಳು ಉಂಟಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ. ನಿಗಮ ಇದಕ್ಕೆ ಜವಾಬ್ದಾರಿಯಾಗಿರುವುದಿಲ್ಲ.
9. ಸರ್ಕಾರದ ನಿಯಮದಂತೆ ಕಡ್ಡಾಯವಾಗಿ ಕಟಾಯಿಸಬೇಕಾದ ಮೊತ್ತಗಳನ್ನು ಬಿಲ್‌ನಲ್ಲಿ ಕಟಾಯಿಸಿ ಬಿಲ್ ಪಾವತಿಸತಕ್ಕದ್ದು.
10. ಜಿಲ್ಲಾ ವ್ಯವಸ್ಥಾಪಕರು ತಮ್ಮ ವಿವೇಚನೆಯನ್ನು ಬಳಸಿ ಸಂಪೂರ್ಣ ಜವಾಬ್ದಾರಿಯನ್ನು ವಾಹನವನ್ನು ಬಾಡಿಗೆ ಆಧಾರದಲ್ಲಿ ಪಡೆದು ನಿರ್ವಹಿಸತಕ್ಕದ್ದು.
11. ಕರ್ನಾಟಕ ಪಾರದರ್ಶಕ ನಿಯಮಗೊಳಪಟ್ಟು ಷರತ್ತುಗಳನ್ನು ಜಿಲ್ಲಾ ವ್ಯವಸ್ಥಾಪಕರ ಹಂತದಲ್ಲಿ ವಿಧಿಸಿ ಪಡೆಯುವುದು.
12. ಸ್ವಂತ ವಾಹವನ್ನು ಹೊಂದಿರುವ ಪಾರವಾನಗಿ ಮಾಲೀಕ/ಚಾಲಕರಿಗೆ ಮೊದಲ ಆದ್ಯತೆ ನೀಡುವುದು.

No. 195 Date 11/7/22

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ
ಜಿಲ್ಲಾ ವ್ಯವಸ್ಥಾಪಕರು
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ,
ಬೆಂಗಳೂರು (ನ) ಜಿಲ್ಲೆ.

ಪ್ರತಿ:

1. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ